# ಕೃತಜ್ಞತಾರ್ಪಣೆ 2026

ಆತ್ಮೀಯ ಸಹೋದರ ಸಹೋದರಿಯರೇ,

ಅಕ್ಟೋಬರ್ 4, ಭಾನುವಾರದಂದು ನಮ್ಮ ಚರ್ಚಿನ ಕೃತಜ್ಞತಾರ್ಪಣೆಯ ದಿನವನ್ನು ಆಚರಿಸಲು ನಾವು ಸಿದ್ಧರಾಗುತ್ತಿರುವಾಗ, ಈ ಇಡೀ ವರ್ಷ ನಮ್ಮನ್ನು ಮುನ್ನಡೆಸಿದ: **"ಅಂಜಬೇಡ, ನಂಬಿಕೆ ಮಾತ್ರ ಇರಲಿ"** (ಮಾರ್ಕ 5:36) ಎಂದಿರುವ ಈ ಸ್ಫೂರ್ತಿದಾಯಕ ವಾಕ್ಯವನ್ನು ಹಿಡಿದುಕೊಂಡು ನಾವು ಈ ಹಬ್ಬದಲ್ಲಿ ಕಾಲಿಡೋಣ.

ಯಾಯೀರನು ಭಯ ಹಾಗು ನಂಬಿಕೆಯ ನಡುವೆ ನಿಂತವನಾಗಿ ಈ ಮಾತುಗಳನ್ನು ಕೇಳಿಸಿಕೊಂಡನು. ಅವನು ಯಾವುದರ ಬಗ್ಗೆ ಅತಿ ಹೆಚ್ಚು ಹೆದರುತ್ತಿದ್ದನೋ ಅದುವೇ ನಿಜವಾಗುವಂತೆ ತೋರುತ್ತಿತ್ತು; ಆದಾಗ್ಯೂ, ಯೇಸುವು ತನ್ನಲ್ಲಿ ಭರವಸವಿಡುವುದನ್ನು ಮುಂದುವರಿಸಬೇಕೆಂದು ಅವನಿಗೆ ಹೇಳಿದನು. ಅವನು ಭಯಪಡುವುದಕ್ಕೆ ಅವನ ಪರಿಸ್ಥಿತಿಗಳು ಎಲ್ಲಾ ಕಾರಣಗಳನ್ನು ಹೊಂದಿದ್ದವು; ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಬೇಕೆಂದು ಯೇಸುವು ಅವನಲ್ಲಿ ಕೇಳಿಕೊಂಡನು.

ಬಹುಶಃ ಕೃತಜ್ಞತಾರ್ಪಣೆಯು ಸಹ ಅಲ್ಲಿಂದಲೇ ಪ್ರಾರಂಭಗೊಳ್ಳುತ್ತದೆ: ಭರವಸೆಯಿಂದ.

ನಾವು ನಮ್ಮ ಜೀವಿತಗಳಲ್ಲಿ ಆಶೀರ್ವಾದಗಳನ್ನು ಸ್ಪಷ್ಟವಾಗಿ ಕಾಣುತ್ತಿರುವಾಗ ಕೃತಜ್ಞತೆ ಸಲ್ಲಿಸುವುದು ಸುಲಭವಾಗುತ್ತದೆ. ಆದರೆ ಕೃತಜ್ಞತೆ ಎಂಬುದು ಚೆನ್ನಾಗಿ ನಡೆದ ವಿಷಯಗಳನ್ನು ಎಣಿಸುವುದಕ್ಕಿಂತಲೂ ಹೆಚ್ಚು ಆಳಾವಾದ ವಿಷಯವಾಗಿದೆ. ನಮ್ಮ ಪರಿಸ್ಥಿತಿಗಳು ಏನೇ ಇರಲಿ, ದೇವರು ನಮಗೆ ಇನ್ನೂ ಸ್ವಲ್ಪ ಹತ್ತಿರವಾದನೆಂಬುದನ್ನು ಅನುಭವಿಸುವುದರೊಂದಿಗೆ ಇದು (ಕೃತಜ್ಞತೆ) ಪ್ರಾರಂಭವಾಗುತ್ತದೆ. ಯೇಸು ಕ್ರಿಸ್ತನ ಮೂಲಕ, ನಾವು ನಮ್ಮ ಸ್ವಂತ ಪ್ರಯತ್ನದಿಂದ ಎಂದಿಗೂ ಸಂಪಾದಿಸಲು ಅಥವಾ ಒದಗಿಸಿಕೊಳ್ಳಲು ಸಾಧ್ಯವಾಗಲಾರದ್ದನ್ನು ಆತನು ನಮಗೆ ನೀಡಿದ್ದಾನೆ. ನಮ್ಮ ಯಾವುದೇ ಬಲಿದಾನದಿಂದ ಎಂದಿಗೂ ಸಾಧ್ಯವಾಗದಿದ್ದನ್ನು ಕ್ರಿಸ್ತನು ಆಗಲೇ ಶಿಲುಬೆಯ ಮೇಲೆ ಮಾಡಿದ್ದಾನೆ. ನಾವು ದೇವರ ಬಳಿಗೆ ಏನನ್ನಾದರೂ ತರುವುದಕ್ಕಿಂತ ಮುಂಚಿತವಾಗಿಯೇ ಆತನ ಪ್ರೀತಿಗೆ ಪಾತ್ರರಾಗಿದ್ದೇವೆ.

ಇದು, ನಾವು ಕೊಡುವುದರ ಬಗ್ಗೆ ಯೋಚಿಸುವ ರೀತಿಯನ್ನೇ ಬದಲಾಯಿಸುತ್ತದೆ.

ನಾವು ದೇವರ ಮೆಚ್ಚುಗೆಯನ್ನು ಗಳಿಸಲು ಕಾಣಿಕೆ ಕೊಡುವುದಿಲ್ಲ. ನಾವು ನಮ್ಮ ನಂಬಿಕೆಯನ್ನು ಸಾಬೀತುಪಡಿಸಲು ಕಾಣಿಕೆ ಕೊಡುವುದಿಲ್ಲ. ಮತ್ತು ದೇವರು ನಮ್ಮಿಂದ ಪ್ರತಿಯಾಗಿ ಏನನ್ನೂ ಅಪೇಕ್ಷಿಸುವುದಿಲ್ಲ. ಬದಲಾಗಿ, ನಾವು ಆತನಿಂದ ಹೊಂದಿರುವುದರ ಕುರಿತು ಚಿಂತನೆ ಮಾಡುವಾಗ, ಕೃತಜ್ಞತೆಯು ಸಹಜವಾಗಿಯೇ ತನ್ನನ್ನು ವ್ಯಕ್ತಪಡಿಸಿಕೊಳ್ಳಲು ಮಾರ್ಗ ಹುಡುಕಿಕೊಳ್ಳುತ್ತದೆ.

ಇದು ತ್ಯಾಗದ (ಬಲಿದಾನದ) ತಿರುಳಾಗಿದೆ. ತ್ಯಾಗವು (ಬಲಿದಾನ) ದೇವರನ್ನು ಆರಾಧಿಸುವ, ಆತನಿಗೆ ಕೃತಜ್ಞತೆ ಸಲ್ಲಿಸುವ ಮತ್ತು ನಮ್ಮನ್ನು ಆತನಿಗೆ ಒಪ್ಪಿಸಿಕೊಡುವ ಒಂದು ವಿಧಾನವಾಗಿದೆ ಎಂದು ಕ್ಯಾಟಕಿಸಮ್ ವಿವರಿಸುತ್ತದೆ (ಸಂಕ್ಷಿ. ಸಿಎನ್ಎಸಿ 13.2). ಇದರ ಅರ್ಥವೇನೆಂದರೆ, ದೇವರು ನಮಗೆ ವಹಿಸಿಕೊಟ್ಟಿರುವುದನ್ನು ಗುರುತಿಸುವುದು ಮತ್ತು ಕೃತಜ್ಞತಾಭಾವನೆಯಿಂದ ನಮ್ಮಲ್ಲಿರುವ ಏನನ್ನಾದರೂ ಆತನಿಗೆ ಅರ್ಪಿಸುವುದು. ನಮ್ಮ ಆರ್ಥಿಕ ಕಾಣಿಕೆಯು ಆ ತ್ಯಾಗದ ಒಂದು ಅಭಿವ್ಯಕ್ತಿಯಾಗಿರುತ್ತದೆ.

ದೀರ್ಘಕಾಲದಿಂದಲೂ ಪವಿತ್ರ ಶಾಸ್ತ್ರವು ಕಾಣಿಕೆ ಕೊಡುವುದು ದೇವರಲ್ಲಿರುವ ಭರವಸೆಯೊಂದಿಗೆ ಸಂಬಂಧ ಹೊಂದಿರುವುದೆಂದು ತೋರಿಸುತ್ತದೆ. ದೇವರಿಗೆ ಅಗತ್ಯವಾಗಿರುವುದೆಂದು ಪ್ರಥಮಫಲಗಳು ಆತನ ಬಳಿಗೆ ತರಲ್ಪಡಲಿಲ್ಲ, ಬದಲಾಗಿ ತಮ್ಮ ಆಶೀರ್ವಾದಗಳು ಎಲ್ಲಿಂದ ಬಂದಿರುವವೆಂದು ಆತನ ಜನರು ಗುರುತಿಸಿದ ಕಾರಣ ಅವು ತರಲ್ಪಟ್ಟವು (ಸಂಕ್ಷಿ. ವಿಮೋಚನ 23: 19). ಯೇಸುವು ಕೂಡ ಕಾಣಿಕೆ ಕೊಡುವುದರ ಬಗ್ಗೆ ಮಾತನಾಡಿದನು, ಅದೇ ಸಮಯದಲ್ಲಿ ಆತನು ಹಣಕ್ಕಿಂತಲೂ ಹೆಚ್ಚಾಗಿ ಕೊಡುವವರ ಹೃದಯದ ಕಡೆಗೆ ಸತತವಾಗಿ ಗಮನ ಸೆಳೆದನು.

ಇದನ್ನು ನಾವು ಎರಡು ಕಾಸುಗಳನ್ನು ಹಾಕಿದ ಬಡ ವಿಧವೆಯಲ್ಲಿ ನೋಡುತ್ತೇವೆ (ಲೂಕ 21:1–4). ಆಕೆಯ ಕಾಣಿಕೆಯು ಸುಲಭವಾಗಿ ಗಮನಕ್ಕೆ ಬಾರದೆ ಹೋಗಬಹುದಿತ್ತು. ಆದರೆ ಯೇಸುವು ಆಕೆಯನ್ನು ನೋಡಿದನು. ಆಕೆಯು ಏನನ್ನು ಕೊಟ್ಟಳೆಂಬುದನ್ನು ನೋಡುವುದಲ್ಲದೆ ಆಕೆಯು ಯಾವ ಮನಸ್ಸಿನಿಂದ ಅದನ್ನು ಕೊಟ್ಟಳೆಂಬುದನ್ನೂ ಆತನು ನೋಡಿದನು.

ನಾವು ಕೊಡುವ ಕಾಣಿಕೆಯು ನಾವು ದೇವರ ಪ್ರತಿ ಹೊಂದಿರುವ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವ ಒಂದು ವಿಧಾನವಾಗಿದೆ. ಒಬ್ಬ ವಿಶ್ವಾಸಿಯು "ವ್ಯಾಪಕ ಅರ್ಥದಲ್ಲಿ, ತನ್ನ ಹೃದಯವನ್ನೇ ಸಮರ್ಪಿಸಿಕೊಳ್ಳುವ ಮೂಲಕವೂ ತನ್ನ ತ್ಯಾಗ (ಕಾಣಿಕೆ)" ತರಬಹುದೆಂದು ಕ್ಯಾಟಕಿಸಮ್ ನಮ್ಮನ್ನು ಜ್ಞಾಪಿಸುತ್ತದೆ (ಸಿಎನ್ಎಸಿ 13.2.3). ಈ ರೀತಿಯಲ್ಲಿ, ನಮ್ಮ ಕೃತಜ್ಞತೆಯ ಭಾವನೆಯು ನಾವು ಹೇಗೆ ನಮ್ಮನ್ನು ಅರ್ಪಿಸಿಕೊಳ್ಳುತ್ತೇವೆ ಎಂಬುದನ್ನೂ ರೂಪಿಸಬಹುದು – ನಮ್ಮ ಸಮಯ, ನಮ್ಮ ಯೋಗ್ಯತೆಗಳು, ನಮ್ಮ ಗಮನ, ನಮ್ಮ ಕಾಳಜಿ. ಇದು, ಸಂಕಷ್ಟದಲ್ಲಿರುವವರಿಗೆ ಪ್ರೋತ್ಸಾಹವಾಗಿರಬಹುದು, ಒಂಟಿಯಾಗಿರುವವರಿಗೆ ಒದಗಿಸುವ ಊಟವಾಗಿರಬಹುದು, ನಮ್ಮ ಕುಟುಂಬದಲ್ಲಿ ತಾಳ್ಮೆಯಾಗಿರಬಹುದು, ಕ್ಷಮಿಸಲು ಕಷ್ಟವೆನಿಸುವ ಕ್ಷಮಾಪಣೆಯಾಗಿರಬಹುದು ಅಥವಾ ಮತ್ತೊಬ್ಬ ವ್ಯಕ್ತಿಗೆ ನಮ್ಮ ಅಗತ್ಯವಿದ್ದಾಗ ಅವರ ಪಕ್ಕದಲ್ಲಿರುವ ನಮ್ಮ ಸಿದ್ಧಮನಸ್ಸಾಗಿರಬಹುದು.

ನ್ಯೂ ಅಪೊಸ್ಟಾಲಿಕ್ ಚರ್ಚ್
ಇಂಡಿಯಾ

# ಕೃತಜ್ಞತಾರ್ಪಣೆ 2026

ಇವುಗಳಲ್ಲಿ ಯಾವ ವಿಷಯವೂ ಅಸಾಧಾರಣವೆನಿಸದೇ ಇರಬಹುದು. ಆ ಎರಡು ಕಾಸುಗಳು ಕೂಡ ಹಾಗನಿಸಲ್ಲಿ.

ದೇವರು ನಮಗೆ ನೀಡಿರುವ ಎಲ್ಲದಕ್ಕೂ ನಮ್ಮ ಪ್ರತಿಕ್ರಿಯೆ ಏನಾಗಿರುವುದೆಂದು ಪರಿಗಣಿಸಲು ಕೃತಜ್ಞತಾರ್ಪಣೆಯು ನಮ್ಮೆಲ್ಲರನ್ನು ಆಹ್ವಾನಿಸುತ್ತದೆ. ಕೃತಜ್ಞತೆಯುಳ್ಳವನಾಗಿ ನಾನಾತನ ಬಳಿಗೆ ಏನನ್ನು ತರಬಹುದು? ಈ ಕೃತಜ್ಞತಾಭಾವನೆಯು ನಾನು ಜೀವಿಸುವ, ಕಾಣಿಕೆ ಹಾಕುವ, ಮತ್ತು ಸೇವೆ ಮಾಡುವ ವಿಧಾನದಲ್ಲಿ ಹೇಗೆ ಮಾರ್ಪಡಬಹುದು?

ನಾವು ಈ ರೀತಿಯಲ್ಲಿ ಜೀವಿಸುವುದನ್ನು ನೋಡುವಾಗ ನಮ್ಮ ಮಕ್ಕಳು ಏನಾದರೂ ಸುಂದರವಾಗಿರುವುದನ್ನು ಕಲಿತುಕೊಳ್ಳಬಹುದು. ಕೃತಜ್ಞತೆಯು ನಾವು ಮಾತಾಡುವುದಕ್ಕಿಂತಲೂ ಹೆಚ್ಚಿನದಾಗಿದೆ ಎಂಬುದನ್ನೂ ಮತ್ತು ದೇವರಲ್ಲಿನ ಭರವಸೆಯು ನಾವು ಅರಿಕೆ ಮಾಡುವುದಕ್ಕಿಂತಲೂ ಹೆಚ್ಚಿನದಾಗಿದೆ ಎಂಬುದನ್ನೂ ಅವರು ಕಲಿಯುತ್ತಾರೆ. ದೇವರು ನಮಗೆ ಅನುಗ್ರಹಿಸಿರುವ ವರಗಳು ಕೇವಲ ನಮಗೋಸ್ಕರ ಅಲ್ಲ ಎಂಬುದನ್ನು ಅವರು ನೋಡುತ್ತಾರೆ. ನಾವು ನಮ್ಮ ಸಮಯವನ್ನು ಬಳಸುವ, ಜನರೊಂದಿಗೆ ವರ್ತಿಸುವ, ಸೇವೆ ಸಲ್ಲಿಸುವ, ಹಂಚಿಕೊಳ್ಳುವ, ಮತ್ತು ಜೀವಿಸುವ ವಿಧಾನವನ್ನು ನಂಬಿಕೆಯು ಹೇಗೆ ರೂಪಿಸಬಲ್ಲದು ಎಂಬುದನ್ನು ಅವರು ನೋಡುತ್ತಾರೆ.

ಹೇಗೂ, ಇದು ನಮ್ಮ ಸಭೆಯ ಧ್ಯೇಯದ ಅಂಗವಾಗಿದೆ: ಪ್ರತಿಯೊಬ್ಬರು ದೇವರ ಪ್ರೀತಿಯನ್ನು ಹಾಗು ಆತನನ್ನೂ ಇತರರನ್ನೂ ಸೇವಿಸುವ ಆನಂದವನ್ನು ಅನುಭವಿಸಬಹುದಾದ ಆತ್ಮೀಯ ಅನ್ಯೋನ್ಯತೆಯನ್ನು ಬೆಳೆಸುವುದು.

ಹೀಗಾಗಿ, ಅಕ್ಟೋಬರ್ 4 ಸಮೀಪಿಸುತ್ತಿರುವಂತೆ, ನಾವು ಕೃತಜ್ಞತಾಭಾವನೆಯಿಂದ ದೇವರು ನಮಗೆ ಅನುಗ್ರಹಿಸಿದ ಪ್ರತಿಯೊಂದು ವಿಷಯವನ್ನೂ ಗುರುತಿಸೋಣ. ಆತನಲ್ಲಿ ಭರವಸವಿಡುತ್ತಾ – ಪ್ರತಿಯೊಬ್ಬರು ನಮ್ಮದೇ ಆದ ರೀತಿಯಲ್ಲಿ – ನಾವಾತನಿಗೆ ಕಾಣಿಕೆ ನೀಡುವ, ಇತರರೊಂದಿಗೆ ಹಂಚಿಕೊಳ್ಳುವ, ಮತ್ತು ನಾವು ಹೇಗೆ ನಮ್ಮನ್ನು ಸಮರ್ಪಿಸಿಕೊಳ್ಳುತ್ತೇವೆಂಬ ವಿಧಾನದಲ್ಲಿ – ಈ ಕೃತಜ್ಞತೆಯು ವ್ಯಕ್ತವಾಗಲಿ.

ನಮ್ಮ ಜಿಲ್ಲೆಯ ಅಪೊಸ್ತಲರು ಮತ್ತು ಬಿಷಪ್‌ಗಳೊಂದಿಗೆ ಜೊತೆಗೂಡಿ, ನಾವು ನಿಮಗೂ ನಿಮ್ಮ ಪ್ರಿಯರಿಗೂ ಒಂದು ಆಶೀರ್ವಾದಭರಿತ ಹಾಗು ಕೃತಜ್ಞತಾಭರಿತ ಕೃತಜ್ಞತಾರ್ಪಣೆಯ ಆಚರಣೆಯನ್ನು ಹಾರೈಸುತ್ತೇವೆ.

ಆತ್ಮೀಯವಾಗಿ,



ಅರ್ನೌಡ್ ಮಾರ್ಟಿಗ್

**Thanksgiving**
4 October 2026
Kannada